ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ

ಸಂಖ್ಯೆ:ವಿಪತ್ತು ನಿರ್ವಹಣೆ:ಕೋವಿಡ್-19:ಸಿಆರ್-1/2021-22 ದಿನಾಂಕ:07-05-2021

## :: ಅಧಿಕೃತ ಜ್ಞಾಪನ ಪತ್ರ ::

ವಿಷಯ:- ಕೋವಿಡ್-19 ಸಾಂಕ್ರಾಮಿಕ ರೋಗದ 2ನೇ ಅಲೆಯು ತೀವ್ರಗತಿಯಲ್ಲಿದ್ದು, ಸೋಂಕಿತರುಗಳ ಚಿಕಿತ್ಸೆಗಾಗಿ ಅವಶ್ಯವಿರುವ ವೈದ್ಯಕೀಯ ಆಕ್ಸಿಜನ್ ಪೂರೈಕೆ, ಬಳಕೆಯ ಬಗ್ಗೆ ನಿಗಾವಹಿ ವಹಿಸಲು ತಂಡವನ್ನು ಪುನರ್ ರಚಿಸಿರುವ ಕುರಿತು.

ಉಲ್ಲೇಖ:- 1) ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 158 ಟಿಎನ್‌ಆರ್ 2020(3), ದಿನಾಂಕ:3-5-2021

2) ಈ ಪ್ರಾಧಿಕಾರದ ಸಮಸಂಖ್ಯೆ ಅಧಿಕೃತ ಜ್ಞಾಪನ ಪತ್ರಗಳ ದಿನಾಂಕ:3-5-2021, 4-5-2021, ದಿ:5-5-2021 ಮತ್ತು ದಿನಾಂಕ:7-5-2021.

----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (1)ರ ಸರ್ಕಾರಿ ಆದೇಶವನ್ನು ಅನುಸರಿಸಿ ಜಿಲ್ಲೆಯಲ್ಲಿ ಕೋವಿಡ್-19 ಸೋಂಕಿತರ ಚಿಕಿತ್ಸೆಗಾಗಿ ಅತ್ಯಂತ ಅವಶ್ಯಕವಾಗಿರುವ ಮೆಡಿಸಿನಲ್ ಆಕ್ಸಿಜನ್/ಲಿಕ್ವಿಡ್ ಆಕ್ಸಿಜನ್ ಪೂರೈಕೆ ಸಂಬಂಧ ದೈನಂದಿನ ಬೇಡಿಕೆ, ಪೂರೈಕೆ ಹಾಗೂ ಬಳಕೆಯ ಬಗ್ಗೆ ತೀವ್ರ ನಿಗಾವಹಿಸಲು **ಅಪರ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ** ಇವರ ನೇತೃತ್ವದಲ್ಲಿ ಉಲ್ಲೇಖ (2)ರಲ್ಲಿ ತಂಡವನ್ನು ರಚಿಸಿ ಆದೇಶಿಸಲಾಗಿರುತ್ತದೆ.

ಕೋವಿಡ್ ಸೋಂಕಿತರುಗಳ ಚಿಕಿತ್ಸೆಗಾಗಿ ಅವಶ್ಯವಿರುವ ವೈದ್ಯಕೀಯ ಆಮ್ಲಜನಕದ ವಿವೇಚನಬದ್ಧ ಬಳಕೆಯ ಬಗ್ಗೆ ಸರ್ಕಾರದ ಮಾರ್ಗಸೂಚಿ ಇದ್ದು, ಜಿಲ್ಲಾ ವ್ಯಾಪ್ತಿಯಲ್ಲಿ ಸೋಂಕಿತರ ಚಿಕಿತ್ಸೆಗಾಗಿ ಪೂರೈಕೆಯಾಗುತ್ತಿರುವ ವೈದ್ಯಕೀಯ ಆಮ್ಲಜನಕದ ವಿವೇಚನಬದ್ಧ ಬಳಕೆಯ ಬಗ್ಗೆ ಪರಿಶೀಲನೆ ನಡೆಸಲು ಈ ಕೆಳಕಂಡಂತೆ ಅಧಿಕಾರಿಗಳ ತಂಡವನ್ನು ರಚಿಸಿ ಆದೇಶಿಸಿದೆ.

| ಕ್ರಸಂ | ಅಧಿಕಾರಿಗಳ ತಂಡದ ವಿವರ |
|---|---|
| 1 | ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿತ್ರದುರ್ಗ, ಮೊ:9886907455 |
| 2 | ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ವಿಭಾಗ, ಚಿತ್ರದುರ್ಗ ಮೊ: 9448589335 |
| 3 | ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಚಿತ್ರದುರ್ಗ |
| 4 | ಸಹಾಯಕ ಔಷಧ ನಿಯಂತ್ರಕರು, ಚಿತ್ರದುರ್ಗ, ಮೊ:934126421 |
| 5 | ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಸರ್ವೇಕ್ಷಣ ಘಟಕ, ಚಿತ್ರದುರ್ಗ ಮೊ:7349701471 |

ಮೇಲ್ಕಂಡ ಅಧಿಕಾರಿಗಳ ತಂಡವು ಜಿಲ್ಲಾ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿತರ ಚಿಕಿತ್ಸೆ ನಡೆಸುತ್ತಿರುವ ಆಸ್ಪತ್ರೆವಾರು ವೈದ್ಯಕೀಯ ಆಮ್ಲಜನಕ ಸರಬರಾಜುದಾರರಿಂದ ಪೂರೈಕೆಯಾಗಿರುವ ಬಗ್ಗೆ ಹಾಗೂ ಸೋಂಕಿತರ ಚಿಕಿತ್ಸೆಗಾಗಿ ವಿವೇಚನಬದ್ಧವಾಗಿ ಬಳಕೆಯಾಗುತ್ತಿರುವ ದಾಖಲಾತಿಳೊಂದಿಗೆ ಕೂಲಂಕುಷವಾಗಿ ಪರಿಶೀಲಿಸಿ ಕಾಲಕಾಲಕ್ಕೆ ಆಕ್ಸಿಜನ್ ಆಡಿಟ್ ನಡೆಸಿ, ವೈದ್ಯಕೀಯ ಆಮ್ಲಜನಕ ಉಸ್ತುವಾರಿ ನೋಡೆಲ್ ಅಧಿಕಾರಿಗಳಿಗೆ ಹಾಗೂ ಈ ಪ್ರಾಧಿಕಾರಕ್ಕೆ ತಪ್ಪದೇ ವರದಿಯನ್ನು ಸಲ್ಲಿಸಲು ಸೂಚಿಸಿದೆ.

(ಕವಿತಾ ಎಸ್.ಮನ್ನಿಕೇರಿ)
ಜಿಲ್ಲಾಧಿಕಾರಿಗಳು
ಚಿತ್ರದುರ್ಗ ಜಿಲ್ಲೆ

ಪ್ರತಿಯನ್ನು:-

1. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ಜಿಲ್ಲೆ
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ
4. ಅಪರ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ
5. ಸಂಬಂಧಪಟ್ಟ ಅಧಿಕಾರಿಗಳಿಗೆ.